ಎನ್‌ಐಟಿಕೆ ಸುರತ್ಕಲ್

# 'ಸ್ವಚ್ಛತಾ ಪಖ್ವಾಡ' ಆಚರಣೆ

**ಸುರತ್ಕಲ್, ಸೆ. 2:** ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ ಸುರತ್ಕಲ್ ಇಲ್ಲಿ ಸೆ. 1ರಿಂದ 15ರ ರವರೆಗೆ ಭಾರತ ಸರಕಾರದ ಶಿಕ್ಷಣ ಸಚಿವಾಲಯದ ಉಪಕ್ರಮವಾದ 'ಸ್ವಚ್ಛತಾ ಪಖ್ವಾಡ' ಕಾರ್ಯಕ್ರಮಕ್ಕೆ ರಾಮಕೃಷ್ಣ ಮಿಷನ್ ಮಂಗಳೂರು ಇಲ್ಲಿನ ಏಕಗಮ್ಯಾನಂದ ಸ್ವಾಮೀಜಿ ಚಾಲನೆ ನೀಡಿ, ಬಳಿಕ ಸ್ವಚ್ಛತಾ ಕಾರ್ಯದಲ್ಲಿ ಒಗ್ಗಟ್ಟಿನಿಂದ ಗುರಿಯನ್ನು ಮುಟ್ಟಲು ಸಾಧ್ಯವಿದೆ ಎಂದರು.

'ಶೂನ್ಯ ತ್ಯಾಜ್ಯ ನಿರ್ವಹಣೆ' ಕುರಿತು ಕಾರ್ಯಾಗಾರವನ್ನು ಕ್ಯಾಂಪಸ್ ವೇಸ್ಟ್ ಟು ಎನರ್ಜಿ ಯೋಜನೆಯ ಯೋಜನ ತನಿಖಾಧಿಕಾರಿ ಡಾ| ವಾಸುದೇವ ಎಂ. ಮಾಹಿತಿ ನೀಡಿದರು.



ಪ್ರಭಾರ ನಿರ್ದೇಶಕ ಪ್ರೊ| ಮೋಹನ್ ಕುಮಾರ್ ಜೆ.ಸಿ., ರಿಜಿಸ್ಟ್ರಾರ್ ರವೀಂದ್ರನಾಥ್, ರಿಜಿಸ್ಟ್ರಾರ್, ಜಂಟಿ ರಿಜಿಸ್ಟ್ರಾರ್ ರಾಮ್‌ಮೋಹನ್ ವೈ., ಡೀನ್, ಎಚ್‌ಒಡಿಗಳು, ಸಿಬಂದಿ ಮತ್ತು ವಿದ್ಯಾರ್ಥಿಗಳು ಉದ್ಘಾಟನ ಸಮಾರಂಭದಲ್ಲಿ ಭಾಗವಹಿಸಿದ್ದರು.

Udayavani, Date: 26/09/22, P. No, 05